ಬ್ರಾಹ್ಮಣ ಹೆಂಗಸಿಗೆ ಬ್ರಾಹ್ಮಣರೇ ಬೇಕು ಎಂದು ಆಕೆಯನ್ನು ಊರ ಅಂಬಲಕ್ಕೆ ತಂದು ಗಣಪಯ್ಯನಿಗೆ ಮದುವೆ ಮಾಡಿಸಿದರಂತೆ. ಆಗಲೇ ಹುಲಿಯನ್ನು ಕೊಂದು, ಹುಲಿಯ ಮೃತದೇಹದ ಜೊತೆ ಮದುವೆಯನ್ನೂ ಮಾಡಿಸಿಕೊಂಡಿದ್ದ ಗಣಪಯ್ಯನವರಿಗೆ ಇವಳು ಕಾಡಿನಲ್ಲಿ ಸಿಕ್ಕಿದವಳು ಎಂಬ ತಾತ್ಸಾರ. ಅವಳ ಅನುಪಮ ಸೌಂದರ್ಯ ನೋಡಿ ಅನುಮಾನ. ಆಕೆಯ ವೇದಾಧ್ಯಯನ, ಸಂಸ್ಕೃತ ಜ್ಞಾನ ನೋಡಿ ಉರಿ.

'ನಾನು ಬದುಕಿರುವಾಗ ನೀನು ಬೇರೆ ಯಾರಿಗೂ ಚಂದ ಕಾಣುವುದು ಬೇಡ' ಎಂದು ಆಕೆಯ ತಲೆಯನ್ನು ಬೋಳಿಸಿ ಕೋಣೆಯಲ್ಲಿ ಕೂಡಿಹಾಕಿ ಇಟ್ಟಿದ್ದರಂತೆ. ಚಾರುದತ್ತರನ್ನು ಹೆತ್ತು ಎರಡು ವರ್ಷದಲ್ಲೇ ತಾಯಿ ರುಕ್ಮಿಣಿಯಮ್ಮ ಕಾಣೆಯಾದರಂತೆ.

'ಕಾಡಿಂದ ಬಂದವಳು ಕಾಡಿಗೆ ಹೋದಳು' ಎಂದು ಗಣಪಯ್ಯನವರು ಎಂದಿನ ಹಾಗೆ ಇದ್ದರಂತೆ.

'ಹಾಗೆ ಉಂಟಾದವನು ನಾನು. ಮಲಯಾಳ ದೇಶದ ರುಕ್ಮಿಣಿಯಮ್ಮ ಮತ್ತು ಸುಳ್ಯ ಸೀಮೆಯ ಗಣಪಯ್ಯನವರ ಸುಪುತ್ರ' ಎಂದು ಚಾರುದತ್ತರು ಗಹಗಹಿಸಿ ನಕ್ಕಿದ್ದರು. ಚಾರುದತ್ತರ ನಿಜವಾದ ಹೆಸರು ವೆಂಕಟರಮಣ ಜೋಯಿಸ. ಅವರು ಅದನ್ನು ಚಾರುದತ್ತ ಎಂದು ಬದಲಾಯಿಸಿಕೊಂಡಿದ್ದರು.

ಕೊಡಗಿನ ಕೊನೆಯ ರಾಜ ತನ್ನ ಅಧಿಕಾರದ ಕೊನೆಯ ಕಾಲದಲ್ಲಿ ಬಹಳ ಹೆದರಿದ್ದ. ಆತನಿಗೆ ಒಂದು ಕಡೆ ಟೀಪುವಿನ ಕಾಟ. ಇನ್ನೊಂದು ಕಡೆ ಬ್ರಿಟಿಷರ ಉಪಟಳ.

'ನಿನ್ನ ಕಷ್ಟಕ್ಕೆಲ್ಲ ಕಾರಣ ಮಡಿಕೇರಿ ಬೆಟ್ಟದ ತಪ್ಪಲಿನ ಕಾಡಲ್ಲಿರುವ ಶಿವ ಮಹಾದೇವ ದೇವಸ್ಥಾನ ನಿತ್ಯ ಪೂಜೆಯಿಲ್ಲದೆ ಶಿಥಿಲವಾಗಿರುವುದು' ಎಂದು ಯಾರೋ ಪುರೋಹಿತರು ರಾಜನಿಗೆ ಕಣಿ ಹೇಳಿದ್ದರು. ಆ ರಾಜ ತನ್ನ ಆಪ್ತಭಟರ ಪಡೆಯನ್ನು ಕಡಮಕಲ್ಲಿನ ಕಾಡು ಮಾರ್ಗವಾಗಿ ಸುಬ್ರಹ್ಮಣ್ಯ ಸೀಮೆಗೆ ಕಳಿಸಿ ಅಲ್ಲಿಂದ ಬ್ರಾಹ್ಮಣ ದಂಪತಿಯನ್ನು ಎತ್ತಿಕೊಂಡು ಬಾ ಎಂದು ಆಜ್ಞಾಪಿಸಿದನಂತೆ. ಅರ್ಚಕರನ್ನು ಹುಡುಕುತ್ತಾ ಘಟ್ಟ ಇಳಿದು ಹೋದ ಆ ಪಡೆಯ ಕಣ್ಣಿಗೆ ಬಿದ್ದದ್ದು, ಅದಾಗ ತಾನೇ ಉತ್ತರದಿಂದ ವಲಸೆ ಬಂದು ಸುಳ್ಯ ಸೀಮೆಯ ಕಾಡುಗುಡ್ಡದ ಮೇಲೆ ಬದುಕಲು ಪಡಿಪಾಟಲು ಪಡುತ್ತಿದ್ದ ಚಾರುದತ್ತರ ಅಜ್ಜ ಮತ್ತು ಅಜ್ಜಿ. ಆ ಅಜ್ಜ ಬಹಳಷ್ಟು ವರ್ಷ ಶಿವನ ಪೂಜೆ ಮಾಡಿ ಕೊನೆಗೆ ತಾನೂ ಮತಿಭ್ರಮಣೆ ಬಂದು ಸತ್ತು ಹೋದನಂತೆ. ಅಜ್ಜಿ ಒಂದು ಮಗುವನ್ನು ಹೆತ್ತು ಗಡ್ಡೆ ಜ್ವರ ಬಂದು ಯಾವಾಗಲೋ ಮೊದಲೇ ಸತ್ತು ಹೋಗಿದ್ದರಂತೆ. ಆ ಅಜ್ಜನ ಸಮಾಧಿಯೂ ಅವರ ತೋಟದ ಬಂಗಲೆಯ ಎದುರಿನ ಭತ್ತದ ಗದ್ದೆಯ ಬದಿಯಲ್ಲಿರುವ ಹೆಬ್ಬಲಸಿನ ಮರದಡಿಯಲ್ಲಿ ಈಗಲೂ ಇದೆ.

'ಎಂತಹ ತಮಾಷೆ ಅಲ್ಲವಾ' ಎಂದು ಚಾರುದತ್ತರು ನಗುತ್ತಿದ್ದರು.

'ನನ್ನ ಅಜ್ಜ ಅಪ್ಪಟ ವೈಷ್ಣವ. ಅಂದರೆ, ಉಡುಪಿಯ ಕೃಷ್ಣನ ಭಕ್ತ. ಆದರೆ, ಕೊಡಗಿನ ಕ್ರೂರ ರಾಜನಿಗೆ ಹೆದರಿ ಶಿವನನ್ನು ಪೂಜಿಸುತ್ತಾ ಜೀವನವನ್ನೆಲ್ಲ ಕಳೆದ. ಆದರೆ, ಆ ದೇವಸ್ಥಾನ ಶಿವನದಾ? ಅದೂ ಅಲ್ಲ. ಮನುಷ್ಯ ರಕ್ತವನ್ನು ಕುಡಿದು ಬದುಕುತ್ತಿದ್ದ ರಾಕ್ಷಸನನ್ನು ಸಂಹರಿಸಿದ ದೇವಿಯೊಬ್ಬಳ ಅಂಬಲ ಅದು. ಕಾಡಿನಲ್ಲಿ ಬೇಟೆಯಾಡಲು ಬಂದ ಬೇಟೆಗಾರ ಅಯ್ಯಪ್ಪ ದೇವರು ಅವಳನ್ನು ಕಂಡು ಇಷ್ಟಪಟ್ಟು ತಾನೂ ಅಲ್ಲಿಯೇ ನೆಲೆಸಿದ. ಕೊಡಗಿನ ರಾಜನಿಗೆ ಅದು ಶಿವ ದೇಗುಲವಾಗಿ ಕಂಡಿತು.

ಅದು ಹೋಗಲಿ, ಆ ರಾಜನಿಗೆ ಹಾಗೆ ಕಂಡರೆ ಪರವಾಗಿಲ್ಲ. ಅವನು ಕೊಡಗಿನ ಬಾಣಂತಿ ಹೆಂಗಸರ ಮೊಲೆಹಾಲು ತರಿಸಿ ಕುಡಿಸುತ್ತಿದ್ದ ಹುಚ್ಚುಪಾರ್ಟಿ. ಅವನು ಏನು ಬೇಕಾದರೂ ಮಾಡಲಿ. ಆದರೆ, ನನ್ನ ಅಜ್ಜ ಜೀವಮಾನ ಪೂರ್ತಿ ತನ್ನ ಇಷ್ಟದೈವವನ್ನು ಪೂಜಿಸದೆ ಅನ್ಯದೇವರನ್ನು ಪೂಜಿಸಿ ಆ ಪಾಪ ಭಯದಲ್ಲಿ ಹುಚ್ಚನಾಗುವ ಹಾಗೆ ಮಾಡಿದ.

ಇನ್ನು ನನ್ನ ಅಪ್ಪ ಗಣಪಯ್ಯ ತುಂಬಾ ಜಾಣ. ಹುಲಿಯನ್ನು ಕೊಂದು ಕ್ಷತ್ರಿಯನಾದ. ಶಿವನ